# ಶಮಿ ಮತ್ತು ಬೀವಿ

ಮದುವೆಯಾದಾಕ್ಷಣ ಹೆಂಡತಿಯ ಕೈ ಕೈ ಹಿಡಿದು ತಿರುಗಾಡುವುದು ಬಹುತೇಕ ಹುಡುಗರಿಗೆ ಸಂತೋಷದ ಸಂಗತಿ. ತುಂಬ ನಾಚಿಕೆಯ ಸ್ವಭಾವದ ಹುಡುಗರಾದರೆ ತಮ್ಮೂರಿನಲ್ಲಿ ಗಂಭೀರವಾಗಿಯೇ ಇದ್ದು, ಪರಿಚಿತರು ಇಲ್ಲದ ಹೊರ ಊರುಗಳಿಗೆ ಹೋದರೆ ಅಲ್ಲಿ ಬಿಡುಬೀಸಾಗಿ ಅಂಟಿಕೊಂಡೇ ತಿರುಗಾಡುವುದಿದೆ. ಅದು ಮದುವೆಯಾದ ಹೊಸತರ ಸಂಭ್ರಮ. ಅದರಲ್ಲೂ ಹೆಂಡತಿ ತುಂಬ ಸುಂದರಿ ಆಗಿದ್ದರೆ ಅದೊಂದು ಹೆಮ್ಮೆಯ ಸಂಗತಿಯೇ ಸರಿ. ಆದರೆ ಮೊಹಮ್ಮದ್ ಶಮಿಯದ್ದು ಸ್ವಲ್ಪ ಉಲ್ಟಾ ಸಂಗತಿ. ಭಾರತ ಕ್ರಿಕೆಟ್ ತಂಡದಲ್ಲಿ ವೇಗದ ಬೌಲರ್ ಆಗಿ ಮಿಂಚುತ್ತಿರುವ ಮೊಹಮ್ಮದ್ ಶಮಿ, ಮದುವೆಯಾದದ್ದು 2014 ರಲ್ಲಿ. ಆಗ ಮದುಮಕ್ಕಳ ಫೋಟೊ ಪತ್ರಿಕೆಗಳಲ್ಲಿ ಬಂದದ್ದೂ ಯಾರಿಗೂ ನೆನಪಿಲ್ಲ. ಈಗ ಮದುವೆಯಾಗಿ ಎರಡೂವರೆ ವರ್ಷದ ಬಳಿಕ, ಒಂದು ಮಗುವೂ ಆದ ಬಳಿಕ, ಸುಂದರಿ ಹೆಂಡತಿಯನ್ನು ತಬ್ಬಿಕೊಂಡು ಶಮಿ ಒಂದು ಫೋಟೊ ತೆಗೆಸಿಕೊಂಡು ಅದನ್ನು ಫೇಸ್ ಬುಕ್ ನಲ್ಲಿ ಹಾಕಿಕೊಂಡಿದ್ದಾನೆ. ನಿಜಕ್ಕೂ ಶಮಿಯ ಹೆಂಡತಿ ಸುಂದರಿಯೇ. ಅದರಲ್ಲೂ ಆ ಫೋಟೊದಲ್ಲಿ ಆಕೆ ಹಾಕಿಕೊಂಡಿರುವ ಗೌನ್ ಇನ್ನೂ ಚೆನ್ನಾಗಿದೆ. (ಹಾಗೆಂದು ಆಕೆಯ ಪರಿಚಯವೇ ಇಲ್ಲದ ಚಿತ್ರನಟ ಫರ್ಹಾನ್ ಅಖ್ತರ್ ಕೂಡಾ ಕಾಮೆಂಟು ಹಾಕಿದ್ದಾನೆ.)

ಇಷ್ಟಾದದ್ದೇ ತಡ, ಫೇಸ್ ಬುಕ್ ಗೋಡೆಗಳ ತುಂಬೆಲ್ಲಾ ಟೀಕೆಗಳ ಸುರಿಮಳೆಯಾಗಿದೆ. 'ಏನಪ್ಪಾ ಶಮಿ, ನಿನ್ನ ಹೆಂಡತಿಯನ್ನು ಹೀಗೇಕೆ ಸಾರ್ವಜನಿಕವಾಗಿ ಮೆರೆಸುತ್ತಿದ್ದೀಯ' ಎನ್ನುವುದರಿಂದ ಹಿಡಿದು, 'ಇದು ಧರ್ಮದ್ರೋಹ' ಎನ್ನುವಲ್ಲಿವರೆಗೆ, ಒಬ್ಬೊಬ್ಬರದೂ ಒಂದೊಂದು ವಿಧದ ಟೀಕೆ! ಕೆಲವು ಅಭಿಮಾನಿಗಳದ್ದು ಬೇಸರದ ಉದ್ಗಾರವಾದರೆ, ಇನ್ನು ಕೆಲವರದ್ದು ಅಹಂಕಾರದ ಠೇಂಕಾರ. 'ಪರ್ದಾ ಹಾಕಿಸ್ಬಿಟ್ಟು ಹೆಂಡತಿಯನ್ನು ಮನೇಲಿ ಕೂರಿಸಬಾರದೆ?' ಎಂದೂ ಕೆಲವರು ಪ್ರಶ್ನಿಸಿದ್ದಾರೆ. 'ಯಾರು ಯಾರೋ, ಇನ್ಯಾರನ್ನೋ ತಬ್ಬಿಕೊಂಡು ಫೋಟೊ ಹೊಡೆಸಿಕೊಳ್ಳುವ ಯುಗದಲ್ಲಿ ನಾವಿದ್ದೇವೆ, ಪಾಪ, ಅವನ ಹೆಂಡತಿಯನ್ನು ಅವನೇ ತಬ್ಬಿಕೊಂಡು ಫೋಟೊ ಹಾಕಿಸಿಕೊಂಡಿದ್ದಾನೆ..' ಎಂದು ಈ ಅಭಿಮಾನಿಗಳಲ್ಲಿ ಕೆಲವೇ ಕೆಲವರಿಗಷ್ಟೇ ಅನ್ನಿಸಿದೆ!




ಟೀಕೆಗಳ ಬೆನ್ನಲ್ಲೇ ಶಮಿಯ ಕ್ರಿಕೆಟ್ ಗೆಳೆಯ ಮೊಹಮ್ಮದ್ ಕೈಫ್, ಬ್ಯಾಡ್ಮಿಂಟನ್ ತಾರೆ ಜ್ವಾಲಾ ಗುಟ್ಟಾ, ಜಾವೇದ್ ಅಖ್ತರ್ ಮುಂತಾದ ಖ್ಯಾತನಾಮರೂ ಶಮಿಯನ್ನು ಬೆಂಬಲಿಸಿದ್ದಾರೆ. ಶಮಿ ಕೂಡಾ, 'ನನಗೆ ಧರ್ಮ ಕಲಿಸಲು ಬರಬೇಡಿ, ನಾನು ಏನು ಮಾಡುತ್ತಿದ್ದೇನೆಂದು ನನಗೆ ಗೊತ್ತಿದೆ' ಎಂದು ಟೀಕಾಕಾರರ ಮೇಲೆ ಹರಿಹಾಯ್ದಿದ್ದಾನೆ. ಟೀಕಾಕಾರರ ಬಾಯಿ ಮುಚ್ಚಿಸಲು 'ಹರ್ ಕಿಸೀ ಕೋ ಜಿಂದಗೀ ಮೆ ಮುಕಾಮ್ ನ ಮಿಲ್ತಾ; ಕುಚ್ ಕಿಸ್ಮತ್‌ವಾಲೇ ಹಿ ಹೋತೇ ಹೈ ಜಿನ್‌ಹೆ ಯೆ ನಸೀಬ್ ಹೋತಾ ಹೈ' (ಎಲ್ಲರಿಗೂ ಜೀವನದಲ್ಲಿ ಗುರಿ ಸಿಗುವುದಿಲ್ಲ; ಕೆಲವು ಅದೃಷ್ಟವಂತರಿಗಷ್ಟೇ ಈ ಅದೃಷ್ಟ ಲಭಿಸುತ್ತದೆ) ಎಂದು ಶಾಯರಿ ಒಗೆದಿದ್ದಾನೆ. ಜತೆಗೆ 'ಜಲ್ತಾ ರಹೋ...' (ಉರೀತಾ ಇರಿ..) ಎಂದೂ ಚುಚ್ಚಿದ್ದಾನೆ!

ಶಮಿ ಈಗ ಭಾರತ ತಂಡದ ಪ್ರಮುಖ ಬಲಗೈ ವೇಗದ ಬೌಲರ್. ಮೊಣಕಾಲಿನ ಗಾಯದಿಂದಾಗಿ ಈ ಸಲದ ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಅವಕಾಶ ಸಿಕ್ಕಿಲ್ಲವಾದರೂ, ಸಾಧನೆ ಕಡಿಮೆಯೇನಲ್ಲ. ಸ್ವಿಂಗ್ ಮತ್ತು ಸೀಮ್ ಎರಡರಲ್ಲೂ ಸೈ ಎನ್ನಿಸಿಕೊಂಡಿರುವ ಶಮಿ, ರಿವರ್ಸ್ ಸ್ವಿಂಗ್ ಸ್ಪೆಶಲಿಸ್ಟ್. ಸತತವಾಗಿ ಗಂಟೆಗೆ 140 ಕಿ.ಮೀ ವೇಗದಲ್ಲಿ ಬೌಲಿಂಗ್ ಮಾಡಬಲ್ಲ ಅಪರೂಪದ ಪ್ರತಿಭೆಯೀತ. ಉತ್ತರ ಪ್ರದೇಶದ ಅಮ್ರೋಹಾದಲ್ಲಿ ಹುಟ್ಟಿ (ಬರ್ತ್‌ಡೇ 3–9–1990) 15ರ ಹರೆಯದಲ್ಲೇ ಬದ್ರುದ್ದೀನ್ ಸಿದ್ದಿಕಿ ಅವರ ತರಬೇತಿಯಲ್ಲಿ ಅರಳಿದಾತ. ಕೃಷಿಕನಾಗಿರುವ ಅಪ್ಪ ತೌಸೀಫ್ ಅಲಿ ಕೂಡಾ ಯುವಕನಾಗಿದ್ದಾಗ ವೇಗದ ಬೌಲಿಂಗ್ ಮಾಡುತ್ತಿದ್ದರಂತೆ.

ಕ್ಲಬ್ ಕ್ರಿಕೆಟ್ ಇಲ್ಲದ ಉತ್ತರ ಪ್ರದೇಶದಲ್ಲಿ 19ರ ಕೆಳಗಿನವರ ತಂಡ ಆಯ್ಕೆ ಮಾಡುವಾಗ ರಾಜಕೀಯ ನಡೆದು ಶಮಿಗೆ ಸ್ಥಾನ ಸಿಗಲಿಲ್ಲ. ಕೋಚ್ ಸಲಹೆಯಂತೆ ಪಶ್ಚಿಮ ಬಂಗಾಳಕ್ಕೆ ವಲಸೆ ಹೋದ. ಅಲ್ಲಿ ದೇವವ್ರತ ದಾಸ್ ಕೋಚ್ ಆಗಿ ಸಿಕ್ಕಿದ್ದು ಅದೃಷ್ಟ. ದಾಸ್, ಶಮಿಗೆ ತಮ್ಮ ಮನೆಯಲ್ಲೇ ಉಳಿಯಲು ಜಾಗ ಕೊಟ್ಟು ತರಬೇತಿ ನೀಡಿದರು. ನೆಟ್ ಪ್ರಾಕ್ಟೀಸ್‌ನಲ್ಲಿ ತಮಗೆ ಸತತ ಬೌಲಿಂಗ್ ಮಾಡುತ್ತಿದ್ದ ಶಮಿಯ ಪ್ರತಿಭೆಯನ್ನು ಗುರುತಿಸಿದ ಭಾರತ ತಂಡದ ಕ್ಯಾಪ್ಟನ್ ಸೌರವ್ ಗಂಗೂಲಿ ಬೆನ್ನು ತಟ್ಟಿದರು. 22ರ ಹರೆಯದ ಕೆಳಗಿನವರ ಬಂಗಾಳ ತಂಡದಲ್ಲಿ, ಬಳಿಕ ರಣಜಿ ಪಂದ್ಯದಲ್ಲಿ ಅವಕಾಶ ಸಿಕ್ಕಿತು. ಅಲ್ಲಿಂದ ಭಾರತ ತಂಡಕ್ಕೆ ಚಿಮ್ಮುವುದು ಕಷ್ಟವಾಗಲಿಲ್ಲ.

2013ರ ಜನವರಿಯಲ್ಲಿ ಪಾಕಿಸ್ತಾನ ವಿರುದ್ಧ ಮೊದಲ ಒಂದು ದಿನದ ಪಂದ್ಯಕ್ಕೆ ಕಾಲಿಟ್ಟ ಶಮಿ, ನಾಲ್ಕು ಮೇಡನ್ ಓವರ್‌ಗಳನ್ನು ಹಾಕಿ ಪಾಕ್ ತಂಡವನ್ನು ತಬ್ಬಿಬ್ಬುಗೊಳಿಸಿದರು! ಅದೇ ವರ್ಷ ನವೆಂಬರ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಮೊದಲ ಟೆಸ್ಟ್‌ಗೆ ಕಾಲಿಟ್ಟ ಶಮಿ, 4 ವಿಕೆಟ್‌ಗಳನ್ನು ಉರುಳಿಸಿ ಗಮನ ಸೆಳೆದರು. ಅಗತ್ಯ ಬಿದ್ದಾಗ ಬಾಲಂಗೋಚಿ ಆಟದಲ್ಲಿ ಅರ್ಧಶತಕ ಸಿಡಿಸಿದ್ದೂ ಇದೆ. ಟ್ವೆಂಟಿ 20ಯಲ್ಲಿ ಮೊದಲು ಕೆಕೆಆರ್, ಬಳಿಕ ಡೆಲ್ಲಿ ಡೇರ್ ಡೆವಿಲ್ಸ್ ತಂಡದಲ್ಲಿ ಮಿಂಚಿದರು.

ಶಮಿಯ ಪತ್ನಿ ಹಸೀನ್ ಜಹಾಂ, ಕೋಲ್ಕತ್ತಾದಲ್ಲಿ ಮಾಡೆಲ್ ಆಗಿ ಜನಪ್ರಿಯೆ. 2012ರಿಂದಲೇ ಶಮಿಯ ಗೆಳೆತನ ಇತ್ತು. ಶಮಿಗಿಂತ ಒಂದೆರಡು ವರ್ಷ ದೊಡ್ಡವರೂ ಹೌದು. ಈ ಹಿಂದೆ ದೋನಿ ಮತ್ತು ಆರ್.ಅಶ್ವಿನ್ ಪತ್ನಿಯರ ಜತೆ ಜಗಳವಾಡಿ ಸುದ್ದಿಯಾದದ್ದುಂಟು. ಈಗ ಗಂಡನ ಜತೆಗಿನ ಫೋಟೊ ದೊಡ್ಡ ಸುದ್ದಿಯಾಗಿದೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65